ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಗುರುವಾರ, ೦೭, ಮಾರ್ಚ್, ೨೦೨೪(ಫಾಲ್ಗುಣ, ೧೭, ಶಕವರ್ಷ, ೧೯೪೫)<br>BENGALURU, THURSDAY, 07, MARCH, 2024(PHALGUNA, 17, SHAKAVARSHA, 1945) | ನಂ. ೧೭೧<br>No. 171 |
|---|---|---|

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 17 SHASANA 2024, BENGALURU, DATED: 07.03.2024**

The Karnataka Agricultural Produce Marketing (Regulation and Development) (Amendment) Bill, 2024 ಇದಕ್ಕೆ 2024ರ ಮಾರ್ಚ್ ತಿಂಗಳ 6ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 21 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 21 OF 2024**

(First Published in the Karnataka Gazette Extra-ordinary on the 7th day of March, 2024)

**THE KARNATAKA AGRICULTURAL PRODUCE MARKETING (REGULATION AND DEVELOPMENT) (AMENDMENT) ACT, 2024**

(Received the assent of the Governor on the 6th day of March, 2024)

An Act further to amend the Karnataka Agricultural Produce Marketing (Regulation and Development) Act, 1966.

Whereas it is expedient further to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966) for the purposes hereinafter appearing;

Be it enacted by the Karnataka State Legislature in the seventy fifth year of the Republic of India as follows:-

**1. Short title and commencement.**- (1) This Act may be called the Karnataka Agricultural Produce Marketing (Regulation and Development) (Amendment) Act, 2024.

(2) It shall come into force at once.

**2. Amendment of section 63.-** In the Karnataka Agricultural Produce Marketing (Regulation and Development) Act, 1966 (Karnataka Act 27 of 1966) (herein after referred to as the Principal Act) in section 63, in sub-section (2), in clause (a), after sub-clause (xv) the following shall be inserted, namely:-

"(xvi) to make contribution to the Market Development Assistance Fund constituted under section 64-D".

**3. Insertion of new sections 64-D and 64-E.-** After section 64-C of the Principal Act, the following shall be inserted, namely:-

"**64-D. Establishment of Market Development Assistance Fund.-** (1) The State Government shall establish a fund called as the Market Development Assistance Fund. The Agricultural Produce Market Committees shall remit to the said fund not less than 5% of revenue collected from market fee and license fee, before 15th of every month.

(2) The Market Development Assistance Fund shall be administered by a committee consisting of the following members, namely:–

| | | |
|---|---|---|
| (i) | The Minister for Agricultural Marketing | Ex-officio Chairperson |
| (ii) | The Secretary to Government, Department of Co-operation | Ex-officio Member |
| (iii) | The Secretary to Government, Finance Department | Ex-officio Member |
| (iv) | The Director, Agricultural Marketing and Ex-Officio Managing Director of the Karnataka State Agricultural Marketing Board | Ex-officio Member Secretary |

(3) The Managing Director of the Karnataka State Agricultural Marketing Board shall operate the said fund which shall be kept or invested in a Scheduled Bank.

(4) The accounts relating to the fund shall be prepared annually and audited by the State Audit and Accounts Department. Such audited accounts report shall be submitted to the State Government for approval.

**64-E. Application of Market Development Assistance Fund.-** (1) Subject to the provisions of this Act and rules made thereunder, the Market Development Assistance Fund may be utilized for the purpose of development of market yards of financially weak Agricultural Produce Marketing Committees:

Provided that, the Fund may be utilized for any flagship program as suggested by the Chairman.

(2) Such weak Agricultural Produce Marketing Committees shall submit project reports seeking financial assistance for undertaking the development of market yards in their jurisdiction, to the Committee as under sub-section (2) of section 64-D.

(3) Administrating Committee while selecting the financially weak Agricultural Produce Marketing Committees seeking assistance, shall take into account the factors like trade potentiality, availability of resources with the Agricultural Produce Marketing Committee, backwardness of the region, location of the market and the impact on the trade after development etc.”

**4. Amendment of section 112.-** In section 112 of the Principal Act, in sub-section (1), after clause (j), the following shall be inserted, namely:-

“(j-a) to undertake procurement operations of notified agricultural produce under Floor Price Scheme and Minimum Support Price Scheme entrusted by the Government from time to time and to take up commercial operation in respect of the said agricultural produce; and”

By Order and in the name of
the Governor of Karnataka,

**(G. SRIDHAR)**
Secretary to Government
Department of Parliamentary
Affairs and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 17 ಶಾಸನ 2024, ಬೆಂಗಳೂರು, ದಿನಾಂಕ: 07.03.2024.**

The Karnataka Official Language Act, 1963 (Karnataka Act 26 of 1963)ರ ಪ್ರಕರಣ 5-A ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Agricultural Produce Marketing (Regulation and Development) (Amendment) Act, 2024 (Karnataka Act No. 21 of 2024) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 21

(2024 ರ ಮಾರ್ಚ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2024

(2024 ರ ಮಾರ್ಚ್ ತಿಂಗಳ 6ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 63ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 63ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ (ಎ) ಖಂಡದಲ್ಲಿ (xv) ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ,-

"(xvi) 64-ಡಿ ಪ್ರಕರಣದಡಿಯಲ್ಲಿ ರಚಿಸಲಾದ ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಗೆ ಕೊಡುಗೆ ನೀಡುವುದು."

**3. 64-ಡಿ ಮತ್ತು 64-ಇ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದ 64-ಸಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**64-ಡಿ. ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಯ ಸ್ಥಾಪನೆ.-** (1) ರಾಜ್ಯ ಸರ್ಕಾರವು ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿ ಎಂಬ ಹೆಸರಿನಿಂದ ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು. ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕದಿಂದ ಸಂಗ್ರಹವಾದ ರಾಜಸ್ವದ ಶೇಕಡಾ 5ಕ್ಕಿಂತ ಕಡಿಮೆಯಲ್ಲದಷ್ಟನ್ನು ಪ್ರತಿ ತಿಂಗಳ 15ನೇ ದಿನಾಂಕಕ್ಕೆ ಮೊದಲು ಸದರಿ ನಿಧಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಜಮೆ ಮಾಡತಕ್ಕದ್ದು.

(2) ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಯನ್ನು ಈ ಮುಂದಿನ ಸದಸ್ಯರನ್ನೊಳಗೊಂಡ ಸಮಿತಿಯ ಮೂಲಕ ನಿರ್ವಹಿಸತಕ್ಕದ್ದು, ಎಂದರೆ:-

| | | |
|---|---|---|
| (i) | ಕೃಷಿ ಮಾರುಕಟ್ಟೆ ಮಂತ್ರಿ | ಪದನಿಮಿತ್ತ ಅಧ್ಯಕ್ಷ |
| (ii) | ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ | ಪದನಿಮಿತ್ತ ಸದಸ್ಯ |
| (iii) | ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯ |
| (iv) | ನಿರ್ದೇಶಕ, ಕೃಷಿ ಮಾರುಕಟ್ಟೆ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(3) ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು ಸದರಿ ನಿಧಿಯನ್ನು ನಿರ್ವಹಿಸತಕ್ಕದ್ದು, ಅದನ್ನು ಅನುಸೂಚಿತ ಬ್ಯಾಂಕಿನಲ್ಲಿ ಇರಿಸತಕ್ಕದ್ದು ಅಥವಾ ಹೂಡತಕ್ಕದ್ದು.

(4) ನಿಧಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ಸಿದ್ಧಪಡಿಸತಕ್ಕದ್ದು ಹಾಗೂ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆ ನಡೆಸತಕ್ಕದ್ದು. ಅಂಥ ಲೆಕ್ಕಪರಿಶೋಧಿತ ಲೆಕ್ಕಪತ್ರ ವರದಿಯನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**64-ಇ. ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಯ ಅನ್ವಯ.-** (1) ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗೊಳಪಟ್ಟು, ಮಾರುಕಟ್ಟೆ ಅಭಿವೃದ್ಧಿ ನೆರವು ನಿಧಿಯನ್ನು ಆರ್ಥಿಕವಾಗಿ ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಯ ಉದ್ದೇಶಕ್ಕಾಗಿ ಬಳಸಬಹುದು:

ಪರಂತು ನಿಧಿಯನ್ನು ಅಧ್ಯಕ್ಷರ ಸಲಹೆಯಂತೆ ಯಾವುದೇ ಪ್ರಮುಖ (flagship) ಯೋಜನೆಗೆ ಬಳಸಿಕೊಳ್ಳಬಹುದು.

(2) ಅಂಥ ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು 64-ಡಿ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿರುವಂತೆ ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿರುವ ಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಹಣಕಾಸು ನೆರವನ್ನು ಕೋರಿ ಯೋಜನಾ ವರದಿಗಳನ್ನು ಸಮಿತಿಗೆ ಸಲ್ಲಿಸತಕ್ಕದ್ದು.

(3) ನಿರ್ವಹಣಾ ಸಮಿತಿಯು ನೆರವನ್ನು ಕೋರಿದ ಆರ್ಥಿಕವಾಗಿ ಹಿಂದುಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಆಯ್ಕೆ ಮಾಡುವಾಗ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಸಾಮರ್ಥ್ಯ, ಸಂಪನ್ಮೂಲಗಳ ಲಭ್ಯತೆ, ಪ್ರದೇಶದ ಹಿಂದುಳಿದಿರುವಿಕೆ, ಮಾರುಕಟ್ಟೆಯ ಸ್ಥಳ ಮತ್ತು ಅಭಿವೃದ್ಧಿಯ ನಂತರ ಮಾರುಕಟ್ಟೆ ಮೇಲಿನ ಪರಿಣಾಮದಂತಹ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು."

**4. 112ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 112ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"(ಜೆ-ಎ) ಸರ್ಕಾರವು ಕಾಲಕಾಲಕ್ಕೆ ವಹಿಸಿರುವ ಕನಿಷ್ಟ ಬೆಲೆ ಯೋಜನೆ ಮತ್ತು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿಅಧಿಸೂಚಿಸಿದ ಕೃಷಿ ಉತ್ಪನ್ನಗಳ ಸಂಗ್ರಹಣಾ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು ಹಾಗೂ ಸದರಿ ಉತ್ಪನಕ್ಕೆ ಸಂಬಂಧಿಸಿದಂತೆ ವಾಣಿಜ್ಯ ಕಾರ್ಯಾಚರಣೆಯನ್ನು ಕೈಗೆತ್ತಿಕೊಳ್ಳುವುದು; ಮತ್ತು".

The above translation of the Karnataka Agricultural Produce Marketing (Regulation and Development) (Amendment)) Act, 2024 (Karnataka Act 21 of 2024) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH Digitally signed by THAMMAIAH Date: 2024.03.07 19:53:12 +05'30'